


ಗಣಿತದ ಮೋಜು 1

ಎನ್. ವ್ಯಾಪ್ನರ್

ಗಣಿತದ ಮೋಜು


ಭಾಗ 1

ವಿವರಣೆ: ಬಿ. ರೈಟ್‌ಮನ್

ಕನ್ನಡಕ್ಕೆ: ಪ್ರವೀಣ್. ಎಸ್, ಕೋಲಾರ



Prosveshcheniye Publishers
Moscow 1984



ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.


1

ಒಂದು ದೊಡ್ಡ ಮಂಗವು 5 ಬಾಳೆಹಣ್ಣುಗಳನ್ನು ಮತ್ತು ಚಿಕ್ಕ ಮಂಗವು 2 ಬಾಳೆಹಣ್ಣುಗಳನ್ನು ತಿಂದಿವೆ. ಎರಡೂ ಕೋತಿಗಳು ಒಟ್ಟು ಎಷ್ಟು ಬಾಳೆಹಣ್ಣುಗಳನ್ನು ತಿಂದಿವೆ?





2 ಪ್ರತಿಯೊಂದು ಉಕ್ತಿಯನ್ನು ಅದರ ಸರಿಯಾದ ಉತ್ತರದೊಂದಿಗೆ ಜೋಡಿಸಿ.



3 ಲಂಬ ಕೋನಗಳನ್ನು ಗುರುತಿಸುವ ಸಂಖ್ಯೆಗಳನ್ನು ಬರೆಯಿರಿ.



4 ಖಾಲಿ ತಟ್ಟೆಗಳ ಮೇಲೆ ಸರಿಯಾದ ಸಂಖ್ಯೆಯ ಕಿತ್ತಳೆ ಹಣ್ಣುಗಳ ಚಿತ್ರ ಬಿಡಿಸಿ.



5 ಬಿಟ್ಟಸಂಖ್ಯೆಗಳನ್ನು ಚೌಕಗಳಲ್ಲಿ ಬರೆಯಿರಿ.

5+□=8 □+2=7

6+□=9 □+3=10

2+□=6 □+6=8

4+□=9 □+8=10

6 ಬಿಟ್ಟ ಸ್ಥಳಗಳನ್ನು ಸರಿಯಾದ ಸಂಖ್ಯೆಗಳಿಂದ ತುಂಬಿಸಿ.

47	48	49									58
75	74	73									64



7 ಮೊತ್ತ ಕಂಡು ಹಿಡಿದು ಉತ್ತರವನ್ನು ಬರೆಯಿರಿ.

ಈ ಹಾವಾಡಿಗನ ಬಳಿ 5 ದೊಡ್ಡ ಹಾವುಗಳು ಮತ್ತು 10 ಚಿಕ್ಕ ಹಾವುಗಳಿವೆ. ಅವನ ಬಳಿ ಒಟ್ಟು ಎಷ್ಟು ಹಾವುಗಳಿವೆ?

□

8 ಬಿಟ್ಟ ಸಂಖ್ಯೆಗಳನ್ನು ಚೌಕಗಳಲ್ಲಿ ಬರೆಯಿರಿ.

8=2+□+□

9=□+4+□

10=□+□+5

7=1+□+□

9 ಕೆಳಗೆ ತೋರಸಿದ ಮಾದರಿಯಂತೆ ಪ್ರತಿಯೊಂದು ಸಂಖ್ಯೆಯಿಂದ 10ನ್ನು ಕಳೆದು ಸರಿ ಉತ್ತರ ಬರೆಯಿರಿ.

74	66	28	91	22	19	15	20	16	10	12	11
64	56										

ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

10 ಕಾಡಿನಲ್ಲಿ 5 ಹುಲಿ ಮರಿಗಳು ಆಟವಾಡುತ್ತಿದ್ದವು. ನಂತರ 2 ಹುಲಿ ಮರಿಗಳು ಓಡಿಹೋದವು.

ಈಗ ಎಷ್ಟು ಹುಲಿ ಮರಿಗಳು ಉಳಿದಿವೆ?

☐



11 ತೋರಿಸಿರುವಂತೆ ಸರಿಯಾದ ಮೊತ್ತ ಮತ್ತು ವ್ಯತ್ಯಾಸಗಳನ್ನು ಬರೆಯಿರಿ:

ಸಂಖ್ಯೆಗಳು	5 ಮತ್ತು 3	4 ಮತ್ತು 5	9 ಮತ್ತು 1	3 ಮತ್ತು 7	8 ಮತ್ತು 2
ಮೊತ್ತ	8				
ವ್ಯತ್ಯಾಸ	2				




12 ಒಂದು ಚೌಕವನ್ನು ಮಾಡಲು ಸಮ ಅಳತೆ ಉದ್ದದ ಎಷ್ಟು ಸಣ್ಣ ಕಡ್ಡಿಗಳು ಬೇಕು? ಒಂದು ಚೌಕವನ್ನು ಬರೆಯಿರಿ.

☐

13 **ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.**

ಒಂದನೇ ರೈಲ್ವೇ ಬೋಗಿಯಲ್ಲಿ 45 ಹುಡುಗರು ಮತ್ತು ಎರಡನೇ ಬೋಗಿಯಲ್ಲಿ 40 ಹುಡುಗರು ಇದ್ದಾರೆ. ಮೊದಲ ಬೋಗಿಯಲ್ಲಿ ಎಷ್ಟು ಹೆಚ್ಚು ಹುಡುಗರು ಇದ್ದಾರೆ?

14 ಉತ್ತರ 10 ಆಗುವಂತೆ ಖಾಲಿ ಜಾಗಗಳಲ್ಲಿ ಸಂಖ್ಯೆಗಳನ್ನು ಬರೆಯಿರಿ.



15 ಅಂಕಿಗಳ ಸಾಲುಗಳನ್ನು ಮುಂದುವರಿಸಿ, ನಂತರ ಅವುಗಳನ್ನು ಓದಿ.

25	26	27							
37	38	39							
52	53	54							

16 ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಈ ಹುಡುಗನಿಗೆ 14 ವರ್ಷ ಮತ್ತು ಅವನ ತಂಗಿಗೆ 10 ವರ್ಷ.

ಅಣ್ಣನು ತಂಗಿಗಿಂತ ಎಷ್ಟು ವರ್ಷ ದೊಡ್ಡವನು? ☐


ತಂಗಿಯು ಅಣ್ಣನಿಗಿಂತ ಎಷ್ಟು ವರ್ಷ ಚಿಕ್ಕವಳು? ☐



17 ಬಾಣಗಳ ಮೇಲೆ ಅಗತ್ಯವಿರುವ ಚಿಹ್ನೆಗಳು ಮತ್ತು ಸಂಖ್ಯೆಗಳನ್ನು ಬರೆಯಿರಿ.




18 ಆಯತಗಳನ್ನು ಗುರುತಿಸಿ ಅವುಗಳಿಗೆ ಬಣ್ಣ ಹಚ್ಚಿ.



19 ಮೊತ್ತ ಮಾಡಿ ಉತ್ತರವನ್ನು ಬರೆಯಿರಿ.


ಒಬ್ಬ ಅಂಗಡಿಯವನ ಬಳಿ 14 ಅನಾನಸ್ ಹಣ್ಣುಗಳಿವೆ.
ಅವುಗಳಲ್ಲಿ 4 ಕೌಂಟರ್ ಮೇಲೆ ಬಿದ್ದಿವೆ.
ಉಳಿದವು ಬುಟ್ಟಿಯಲ್ಲಿವೆ.
ಬುಟ್ಟಿಯಲ್ಲಿ ಎಷ್ಟು ಅನಾನಸ್ ಹಣ್ಣುಗಳಿವೆ?



20 8 ಉತ್ತರವಾಗಿರುವ ಉಕ್ತಿಗಳಗೆ ಅಡಿಗೆರೆ ಹಾಕಿ.

3+5	6+2	10−4	1+7
3+2	10−2	5+3	2+4
10−3	4+4	9−1	7+1

21 ಖಾಲಿ ಚೌಕಗಳಲ್ಲಿ ಸರಿಯಾದ ಜ್ಯಾಮಿತೀಯ ಆಕಾರಗಳನ್ನು ಬಿಡಿಸಿ.







22 ## ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಮೊದಲ ಪೆಟ್ಟಿಗೆಯಲ್ಲಿ 30 ಸಿಹಿತಿಂಡಿಗಳಿವೆ ಮತ್ತು ಎರಡನೆಯದರಲ್ಲಿ 10 ಕಡಿಮೆ ಸಿಹಿತಿಂಡಿಗಳಿವೆ. ಎರಡನೇ ಪೆಟ್ಟಿಗೆಯಲ್ಲಿ ಎಷ್ಟು ಸಿಹಿತಿಂಡಿಗಳಿವೆ?



23 ಚಿಹ್ನೆಗಳಿಗೆ ಗಮನ ಕೊಟ್ಟು ಸರಿಯಾದ ಫಲಿತಾಂಶ ಬರುವಂತೆ, ಪ್ರತಿಯೊಂದು ಚೌಕದಲ್ಲಿಯೂ ಕೆಲವು ಅಂಕಿಗಳನ್ನು ಬರೆಯಿರಿ.

□ □ □ − □ = □

24 ಬಿಟ್ಟ ಸ್ಥಳಗಳನ್ನು ಸರಿಯಾದ ಸಂಖ್ಯೆಗಳಿಂದ ಭರ್ತಿ ಮಾಡಿ.

+	50	20	30	40	
	30	60			50
ಫಲಿತಾಂಶ	80		90	70	100

25 ## ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಒಂದು ಮರದಲ್ಲಿ 10 ಪಕ್ಷಿಗಳು ಕುಳಿತಿದ್ದವು. ಸ್ವಲ್ಪ ಸಮಯದ ನಂತರ ಇನ್ನೂ ಕೆಲವು ಪಕ್ಷಿಗಳು ಬಂದವು. ನಂತರ ಒಟ್ಟು 17 ಪಕ್ಷಿಗಳಾದವು, ಎಷ್ಟು ಪಕ್ಷಿಗಳು ಬಂದವು?






26 ಕೊಟ್ಟಿರುವ ಉತ್ತರವನ್ನು ಪಡೆಯಲು ಬಿಟ್ಟುಹೋದ ಚಿಹ್ನೆ (+ ಅಥವಾ -) ಮತ್ತು ಸರಿಯಾದ ಸಂಖ್ಯೆಯನ್ನು ಭರ್ತಿ ಮಾಡಿ.




5 + □ = 7   6 ... □ = 2
6 ... □ = 10   8 ... □ = 10
8 ... □ = 3   1 ... □ = 8
9 ... □ = 8   4 ... □ = 1

27 ಎಡಭಾಗದಲ್ಲಿರುವ ವಿನ್ಯಾಸವನ್ನು ಗಮನಿಸಿ. ಬಲಭಾಗದಲ್ಲಿರುವ ವಿನ್ಯಾಸದ ಖಾಲಿಜಾಗದಲ್ಲಿ ಜ್ಯಾಮಿತೀಯ ಆಕಾರಗಳನ್ನು ಸೇರಿಸಿ. ಚಿತ್ರಗಳಿಗೆ ಬಣ್ಣ ಹಾಕಿ.



ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.


28 ಅನಾನಸ್ ಹಣ್ಣು 2 ಕೆಜಿ ತೂಗುತ್ತದೆ. ಕಲ್ಲಂಗಡಿ ಹಣ್ಣು 5 ಕೆಜಿ ತೂಗುತ್ತದೆ. ಕಲ್ಲಂಗಡಿ ಹಣ್ಣು ಅನಾನಸ್ ಹಣ್ಣಿಗಿಂತ ಎಷ್ಟು ಕಿಲೋಗ್ರಾಂಗಳಷ್ಟು ಭಾರವಾಗಿರುತ್ತದೆ?
ಅನಾನಸ್ ಹಣ್ಣು ಕಲ್ಲಂಗಡಿ ಹಣ್ಣಿಗಿಂತ ಎಷ್ಟು ಕಿಲೋಗ್ರಾಂಗಳಷ್ಟು ಹಗುರವಾಗಿರುತ್ತದೆ?



29 ಸಮನಾದ ಉತ್ತರಗಳನ್ನು ಹೊಂದಿರುವ ಉಕ್ತಿಗಳನ್ನು ಸೇರಿಸಲು ಗೆರೆ ಎಳೆಯಿರಿ.

52+3	85+5
61+6	27+40
72+4	35+20
83+7	46+30


30 ಈ ರೇಖೆಯಲ್ಲಿ ಎಷ್ಟು ಭಾಗಗಳಿವೆ?



ಒಂದೇ ಅಳತೆಯ ಕೆಲವು ಸಣ್ಣ ಕಡ್ಡಿಗಳನ್ನು ತೆಗೆದುಕೊಳ್ಳಿ. ಅವುಗಳನ್ನು ಒಟ್ಟಿಗೆ ಸೇರಿಸಿ ವಿಭಿನ್ನ ಜ್ಯಾಮಿತೀಯ ಆಕಾರಗಳನ್ನು ಮಾಡಿ. ಆ ಆಕಾರಗಳ ಚಿತ್ರಗಳನ್ನು ಬರೆಯಿರಿ.

ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

31 ತಟ್ಟೆಯಲ್ಲಿ 9 ರೋಲ್‌ಗಳಿದ್ದವು. ಮಕ್ಕಳು 2 ರೋಲ್‌ಗಳನ್ನು ತೆಗೆದುಕೊಂಡಿದ್ದಾರೆ. ತಟ್ಟೆಯಲ್ಲಿ ಎಷ್ಟು ರೋಲ್‌ಗಳು ಉಳಿದಿವೆ? ☐



32 ಚೌಕಗಳಲ್ಲಿ ಸರಿಯಾದ ಮೊತ್ತವನ್ನು ಬರೆಯಿರಿ.

23	+2	25
	+30	
	+7	
	+5	

33 ಈ ರೇಖೆಯನ್ನು ಅಳೆಯಿರಿ. ☐ ಸೆಂ.ಮೀ.

ಇದಕ್ಕಿಂತ 3 ಸೆಂ.ಮೀ ಉದ್ದದ ರೇಖೆಯನ್ನು ಎಳೆಯಿರಿ. ಅದು ಎಷ್ಟು ಉದ್ದವಾಗಿದೆ? ☐ ಸೆಂ.ಮೀ.

34 ಮೊತ್ತ ಕಂಡುಹಡಿದು ಉತ್ತರವನ್ನು ಬರೆಯಿರಿ.

ಇಬ್ಬರು ಹುಡುಗಿಯರು ಬಣ್ಣದ ಕಾಗದದಿಂದ ವೃತ್ತಗಳನ್ನು ಕತ್ತರಿಸುತ್ತಿದ್ದಾರೆ. ಒಬ್ಬ ಹುಡುಗಿ 17 ವೃತ್ತಗಳನ್ನು ಕತ್ತರಿಸಿದ್ದಾಳೆ ಮತ್ತು ಇನ್ನೊಬ್ಬಳು 6 ಕಡಿಮೆ ವೃತ್ತಗಳನ್ನು ಕತ್ತರಿಸಿದ್ದಾಳೆ. ಎರಡನೇ ಹುಡುಗಿ ಎಷ್ಟು ವೃತ್ತಗಳನ್ನು ಕತ್ತರಿಸಿದ್ದಾಳೆ?



□

ಎರಡನೇ ಹುಡುಗಿ ಕತ್ತರಿಸಿದ ವೃತ್ತಗಳನ್ನು ಬಿಡಿಸಿ,
ಅವುಗಳಿಗೆ ವಿವಿಧ ಬಣ್ಣಗಳನ್ನು ಹಚ್ಚಿ.

○○

35 ಈ ವಿನ್ಯಾಸವನ್ನು ಮುಂದುವರಿಸಿ. ತ್ರಿಕೋನಗಳಿಗೆ ಬಣ್ಣ ಹಾಕಿ.

□ ○ △ ○

36 ಮೇಲಿನ ಸಂಖ್ಯೆಗಳಿಂದ ಕೆಳಗಿನ ಸಂಖ್ಯೆಗಳನ್ನು ಕಳೆದು ಉತ್ತರ ಬರೆಯಿರಿ.

−	45	56	70	38	53	89	94
	3	40	8	20	2	7	60
ಉತ್ತರ	42						



37 ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಮಕ್ಕಳ ಪಾರ್ಟಿಗಾಗಿ 10 ಬಲೂನ್‌ಗಳನ್ನು ಖರೀದಿಸಲಾಗಿದೆ. ಅವುಗಳಲ್ಲಿ 6 ಹಸಿರು ಮತ್ತು ಉಳಿದವು ಹಳದಿ ಬಣ್ಣದ್ದಾಗಿವೆ. ಎಷ್ಟು ಹಳದಿ ಬಲೂನ್‌ಗಳನ್ನು ಖರೀದಿಸಲಾಗಿದೆ?

ಬಲೂನುಗಳಿಗೆ ಸಂಖ್ಯೆಗೆ ಅನುಗುಣವಾಗಿ ಬಣ್ಣಗಳನ್ನು ಹಾಕಿ.

□

38 ಪ್ರತಿಯೊಂದು ಉಕ್ತಿಯನ್ನು ಅದರ ಸರಿ ಉತ್ತರದೊಂದಿಗೆ ಜೋಡಿಸಿ.

45 − 4	41	52 + 7
29 + 30	76	28 + 2
46 + 30	30	72 + 4
27 + 3	66	62 + 6
68 − 2	59	61 − 20



* **39** ಯಾವುದು ಭಾರವಾಗಿರುತ್ತದೆ? ಒಂದು ಕಿಲೋಗ್ರಾಂ ಕಬ್ಬಿಣ ಅಥವಾ ಒಂದು ಕಿಲೋಗ್ರಾಂ ಹತ್ತಿ?

* ಈ ಚಿಹ್ನೆಯ ಸಮಸ್ಯೆಗಳಿಗೆ ಉತ್ತರಗಳು ಪುಟ 42 ರಲ್ಲಿ ನೀಡಲಾಗಿದೆ.

40 ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಈ ಹುಡುಗ ಮೊದಲ ಲಾರಿಯಲ್ಲಿ 5 ಆಟಿಕೆ ಪ್ರಾಣಿಗಳನ್ನು ಮತ್ತು ಎರಡನೆಯದರಲ್ಲಿ 3 ಆಟಿಕೆ ಪ್ರಾಣಿಗಳನ್ನು ಇಟ್ಟಿದ್ದಾನೆ. ಎರಡು ಲಾರಿಗಳಲ್ಲಿ ಒಟ್ಟು ಎಷ್ಟು ಆಟಿಕೆ ಪ್ರಾಣಿಗಳಿವೆ?

☐



41 36 ಉತ್ತರವಾಗಿರುವ ಮೊತ್ತಕ್ಕೆ ಅಡಿಗೆರೆ ಹಾಕಿ.

40 − 4	100 − 70	32 + 4
86 − 40	33 + 3	46 − 20
16 + 20	38 − 2	66 − 30
48 − 2	26 + 10	31 + 5

*42 ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಒಬ್ಬ ಹುಡುಗನಿಗೆ ಮೂರು ಜನ ಸಹೋದರರು ಮತ್ತು ಇಬ್ಬರು ಸಹೋದರಿಯರು.
ಕುಟುಂಬದಲ್ಲಿ ಒಟ್ಟು ಎಷ್ಟು ಮಕ್ಕಳಿದ್ದಾರೆ?

☐




43 ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಮಕ್ಕಳು ರಜೆಗಾಗಿ ತಮ್ಮ ಕೋಣೆಯನ್ನು ಅಲಂಕರಿಸುತ್ತಿದ್ದಾರೆ. ಅವರು ಒಂದು ಗೋಡೆಯ ಮೇಲೆ 18 ಧ್ವಜಗಳನ್ನು ಹಾಕಿದ್ದಾರೆ ಆದರೆ ಇನ್ನೊಂದು ಗೋಡೆಯ ಮೇಲೆ 6 ಧ್ವಜಗಳು ಕಡಿಮೆ ಹಾಕಿದ್ದಾರೆ. ಎರಡನೇ ಗೋಡೆಯ ಮೇಲೆ ಅವರು ಎಷ್ಟು ಧ್ವಜಗಳನ್ನು ಹಾಕಿದ್ದಾರೆ?

☐

44 ಪ್ರತಿಯೊಂದು ಮೊತ್ತವನ್ನು ಅದರ ಸರಿಯಾದ ಉತ್ತರದೊಂದಿಗೆ ಜೋಡಿಸಿ.



*45 ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

7 ಮೇಣದಬತ್ತಿಗಳನ್ನು ಬೆಳಗಿಸಿ ಮೇಜಿನ ಮೇಲೆ ಇಡಲಾಯಿತು. ಎರಡು ಮೇಣದಬತ್ತಿಗಳು ಆರಿಹೋದವು. ಮೇಜಿನ ಮೇಲೆ ಎಷ್ಟು ಮೇಣದಬತ್ತಿಗಳು ಉಳಿದಿವೆ?


☐

ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

46 ಮಕ್ಕಳು ಪೆಟ್ಟಿಗೆಯಿಂದ 3 ಆಟಿಕೆಗಳನ್ನು ತೆಗೆದುಕೊಂಡಿದ್ದಾರೆ. 4 ಆಟಿಕೆಗಳು ಅಲ್ಲಿಯೇ ಉಳಿದಿವೆ. ಮೊದಲು ಪೆಟ್ಟಿಗೆಯಲ್ಲಿ ಎಷ್ಟು ಆಟಿಕೆಗಳು ಇದ್ದವು?



47 ವೃತ್ತಗಳಲ್ಲಿ ಕಾಣೆಯಾದ ಸಂಖ್ಯೆಗಳನ್ನು ಬರೆಯಿರಿ.




* **48** ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಒಂದು ಮೊಟ್ಟೆಯನ್ನು ಬೇಯಿಸಲು 3 ನಿಮಿಷಗಳು ಬೇಕಾಗುತ್ತದೆ.
2 ಮೊಟ್ಟೆಗಳನ್ನು ಬೇಯಿಸಲು ಎಷ್ಟು ಸಮಯ ಬೇಕಾಗುತ್ತದೆ?

ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

49 ಒಂದು ದೋಣಿ 10 ಪ್ರಯಾಣಿಕರನ್ನು ಹೊತ್ತೊಯ್ಯುತ್ತದೆ, ಮತ್ತು ಇನ್ನೊಂದು ದೋಣಿ 12 ಜನರನ್ನು ಹೊತ್ತೊಯ್ಯುತ್ತದೆ. ಎರಡನೇ ದೋಣಿಯು ಮೊದಲ ದೋಣಿಗಿಂತ ಎಷ್ಟು ಹೆಚ್ಚು ಪ್ರಯಾಣಿಕರನ್ನು ಹೊತ್ತೊಯ್ಯುತ್ತದೆ?



50 ಚೌಕಗಳಲ್ಲಿರುವ ಅಂಕಿಗಳಿಂದ ಪೆಟ್ಟಿಗೆಯ ಹೊರಗಿನ ಸಂಖ್ಯೆಗಳನ್ನು ಕಳೆಯಿರಿ. ಉತ್ತರವನ್ನು ಖಾಲಿ ಜಾಗದಲ್ಲಿ ಬರೆಯಿರಿ.

−7

14	7
12	
11	
13	
15	
16	

−8

12	4
17	
11	
15	
13	
16	


* **51** ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಹುಲ್ಲಿನ ಮೇಲೆ 6 ಗುಬ್ಬಚ್ಚಿಗಳು ಕುಳಿತಿದ್ದವು. ಒಂದು ಬೆಕ್ಕು ಕದ್ದು ಬಂದು ಒಂದು ಗುಬ್ಬಚ್ಚಿಯನ್ನು ಹೊತ್ತೊಯ್ಯುತ್ತದೆ. ಈಗ ಹುಲ್ಲಿನ ಮೇಲೆ ಎಷ್ಟು ಗುಬ್ಬಚ್ಚಿಗಳು ಉಳಿದಿವೆ?

52 ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಒಬ್ಬ ಪುಟ್ಟ ಹುಡುಗಿ ಒಂದು ಹೂದಾನಿಯಲ್ಲಿ 7 ಹೂವುಗಳನ್ನು ಹಾಕಿದ್ದಾಳೆ, ಮತ್ತು ಅವಳು ಎರಡನೆಯ ಹೂದಾನಿಯಲ್ಲಿ ಮೊದಲನೆಯದಕ್ಕಿಂತ 2 ಹೂವುಗಳನ್ನು ಹೆಚ್ಚು ಹಾಕಲಿದ್ದಾಳೆ. ಎರಡನೇ ಹೂದಾನಿಯಲ್ಲಿ ಎಷ್ಟು ಹೂವುಗಳಿರುತ್ತವೆ? ಎರಡನೇ ಹೂದಾನಿಯಲ್ಲಿ ಹೂವುಗಳ ಚಿತ್ರವನ್ನು ಬಿಡಿಸಿ.

☐



* 53

ಒಂದೇ ಅಳತೆಯ 7 ಸಣ್ಣ ಕಡ್ಡಿಗಳನ್ನು ತೆಗೆದುಕೊಂಡು ಅವುಗಳನ್ನು ಎರಡು ಚೌಕಗಳಲ್ಲಿ ಜೋಡಿಸಿ. ಈ ಚೌಕಗಳ ಚಿತ್ರವನ್ನು ಬರೆಯಿರಿ.

54 ಈ ಸಂಖ್ಯೆಗಳಿಂದ 9 ನ್ನು ಕಳೆಯಿರಿ.

12	14	17	13	16	15	18	20
3							

55 ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಒಂದು ಬುಟ್ಟಿಯಲ್ಲಿ 12 ಕೆಜಿ ಮಾವಿನಹಣ್ಣುಗಳಿದ್ದವು. ಕೆಲವು ಮಾವಿನಹಣ್ಣುಗಳನ್ನು ಹೊರತೆಗೆದಾಗ 9 ಕೆಜಿ ಉಳಿದಿತ್ತು. ಬುಟ್ಟಿಯಿಂದ ಎಷ್ಟು ಕೆಜಿ ಮಾವಿನಹಣ್ಣುಗಳನ್ನು ಹೊರತೆಗೆಯಲಾಗಿದೆ?

☐




56 ಬಾಣಗಳ ಮೇಲೆ ಸರಿಯಾದ ಚಿಹ್ನೆ ಮತ್ತು ಸಂಖ್ಯೆಗಳನ್ನು ಬರೆಯಿರಿ.

(5) →(+7)→ (12) → (8) → (17) → (9) → (14) → (7)

* 57

ಎರಡು ಜಾಡಿಗಳನ್ನು ಬಳಸಿಕೊಂಡು ನಲ್ಲಿಯಿಂದ 6 ಲೀಟರ್ ನೀರನ್ನು ನೀವು ಹೇಗೆ ಅಳೆಯಬಹುದು? ಒಂದು ಜಾಡಿಯಲ್ಲಿ 2 ಲೀಟರ್ ನೀರು ಹಿಡಿಸುತ್ತದೆ ಮತ್ತು ಇನ್ನೊಂದರಲ್ಲಿ 5 ಲೀಟರ್ ನೀರು ಹಿಡಿಸುತ್ತದೆ.




58 ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಒಬ್ಬ ಮಹಿಳೆ ಹಗಲಿನಲ್ಲಿ 12 ಕೆಜಿ ಚಹಾ ಎಲೆಗಳನ್ನು ಗಿಡಗಳಿಂದ ಆರಿಸಿಕೊಂಡರು ಮತ್ತು ಇನ್ನೊಬ್ಬ ಮಹಿಳೆ 9 ಕೆಜಿ ಚಹಾ ಎಲೆಗಳನ್ನು ಆರಿಸಿಕೊಂಡರು. ಇಬ್ಬರು ಮಹಿಳೆಯರು ಒಟ್ಟು ಎಷ್ಟು ಕೆಜಿ ಚಹಾ ಎಲೆಗಳನ್ನು ಆರಿಸಿಕೊಂಡರು?

59 ಪ್ರತಿಯೊಂದು ಉಕ್ತಿಯನ್ನು ಅದರ ಸರಿ ಉತ್ತರದೊಂದಿಗೆ ಗೆರೆ ಎಳೆದು ಜೋಡಿಸಿ.

25+9	53	28+6
37+8	34	29+8
48+5	37	36+9
46+7	45	49+4

* **60** ಗುಂಪಿಗೆ ಸೇರದ ಜ್ಯಾಮಿತೀಯ ಆಕಾರ ಯಾವುದು?



61 ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಒಬ್ಬ ಪುಟ್ಟ ಹುಡುಗಿಯ ಬಳಿ 15 ಹೂವುಗಳಿದ್ದವು. ನಂತರ ಅವಳು ತನ್ನ ಗೆಳತಿಗೆ ಹಲವಾರು ಹೂವುಗಳನ್ನು ಕೊಟ್ಟಳು. ಈಗ ಅವಳ ಬಳಿ 8 ಹೂವುಗಳು ಮಾತ್ರ ಉಳಿದಿವೆ. ಹುಡುಗಿ ತನ್ನ ಗೆಳತಿಗೆ ಎಷ್ಟು ಹೂವುಗಳನ್ನು ಕೊಟ್ಟಳು?



62 ಸಮನಾದ ಉತ್ತರವನ್ನು ಹೊಂದಿರುವ ಉಕ್ತಿಗಳನ್ನು ಜೋಡಿಸಿ.

28 − 9	65 − 7
46 − 8	34 − 9
32 − 7	42 − 4
62 − 4	22 − 3



* **63** ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಒಬ್ಬ ಹುಡುಗ ಈ ಮನೆಯ ಎರಡನೇ ಮಹಡಿಗೆ ಹೋಗಬೇಕು. ಪ್ರತಿ ಮಹಡಿಯ ನಡುವೆ 20 ಮೆಟ್ಟಿಲುಗಳಿವೆ. ಆ ಹುಡುಗ ಎಷ್ಟು ಮೆಟ್ಟಿಲುಗಳನ್ನು ಹತ್ತಬೇಕು?





64 ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.


ಒಬ್ಬ ರೈತನ ಬಳಿ 12 ಎಮ್ಮೆಗಳಿದ್ದವು. ಮೊದಲು ಅವನು 2 ಎಮ್ಮೆಗಳನ್ನು ಮಾರಿದನು, ನಂತರ 5 ಎಮ್ಮೆಗಳನ್ನು ಮಾರಿದನು. ಅವನ ಬಳಿ ಈಗ ಎಷ್ಟು ಎಮ್ಮೆಗಳು ಉಳಿದಿವೆ? ☐

65 ವೃತ್ತಗಳಲ್ಲಿ ಬಿಟ್ಟ ಸಂಖ್ಯೆಗಳನ್ನು ಬರೆಯಿರಿ.

(7) —+8→ ( ) —+9→ ( ) —+7→ ( ) —−8→ ( ) —−5→ ( ) —−9→ (9)

***66** ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಒಬ್ಬ ಹುಡುಗ ಒಂದು ಕೋಲನ್ನು 7 ತುಂಡುಗಳಾಗಿ ಮಾಡಿದನು. ಅವನು ಅದನ್ನು ಎಷ್ಟು ಬಾರಿ ಕತ್ತರಿಸಿದನು? ☐



67 ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಒಬ್ಬ ಹುಡುಗನ ಬಳಿ 44 ಅಂಚೆ ಚೀಟಿಗಳಿದ್ದವು. ಅವನು ತನ್ನ ಸ್ನೇಹಿತನಿಗೆ ಕೆಲವು ಅಂಚೆಚೀಟಿಗಳನ್ನು ಕೊಟ್ಟನು, ಮತ್ತು ನಂತರ ಅವನ ಬಳಿ 27 ಉಳಿದವು. ಅವನು ತನ್ನ ಸ್ನೇಹಿತನಿಗೆ ಎಷ್ಟು ಅಂಚೆಚೀಟಿಗಳನ್ನು ಕೊಟ್ಟನು? ☐

68 '**45**' ಸರಿ ಉತ್ತರವಾಗಿರುವ ಉಕ್ತಿಗಳಿಗೆ ಅಡಿಗೆರೆ ಹಾಕಿ.


32+13	47−12	36+9
56−9	21+24	54−9
11+34	59−14	69−14
46+9	23+22	38+7

***69** 5 ಸಣ್ಣ ಕೋಲುಗಳನ್ನು ಬಳಸಿ 2 ತ್ರಿಭುಜಗಳು ಮತ್ತು 1 ಚತುರ್ಭುಜವನ್ನು ರಚಿಸಿ. ಈ ಆಕೃತಿಗಳ ಚಿತ್ರ ಬಿಡಿಸಿ.

70 ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಒಂದು ತೋಟದಲ್ಲಿ18 ಆನೆಗಳು ಮತ್ತು ಇನ್ನೊಂದು ತೋಟದಲ್ಲಿ 21 ಆನೆಗಳು ಕೆಲಸ ಮಾಡುತ್ತಿದ್ದವು. ಎರಡನೇ ತೋಟದ ಆನೆಗಳಿಗಿಂತ ಮೊದಲ ತೋಟದಲ್ಲಿ ಎಷ್ಟು ಆನೆಗಳು ಕಡಿಮೆ ಕೆಲಸ ಮಾಡುತ್ತಿದ್ದವು?

☐




71 ಮೊತ್ತ ಕಂಡುಹಿಡಿದು ಸರಿ ಉತ್ತರವನ್ನು ಹೊಂದಿಸಿ ಬರೆಯಿರಿ.

48+7	36	48−12
59−23	63	22+41
94−31	79	33+22
37+42	55	82−3

* **72** ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಒಬ್ಬ ತಾಯಿಗೆ 5 ಹೆಣ್ಣು ಮಕ್ಕಳು. ಪ್ರತಿ ಮಗಳಿಗೆ ಒಬ್ಬ ಸಹೋದರದ್ದಾನೆ. ಈ ತಾಯಿಗೆ ಒಟ್ಟು ಎಷ್ಟು ಮಕ್ಕಳಿದ್ದಾರೆ?

☐



73 ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಒಂದು ಕೋತಿಯ ಬಳಿ ಅನೇಕ ಬಾಳೆಹಣ್ಣುಗಳಿದ್ದವು. ಅದು 12 ಬಾಳೆಹಣ್ಣುಗಳನ್ನು ತಿಂದ ನಂತರ, 15 ಬಾಳೆಹಣ್ಣುಗಳು ಉಳಿದಿದ್ದವು. ಆರಂಭದಲ್ಲಿ ಕೋತಿಯ ಬಳಿ ಎಷ್ಟು ಬಾಳೆಹಣ್ಣುಗಳಿದ್ದವು?

☐

74 ಕಾಣೆಯಾದ ಸಂಖ್ಯೆಗಳನ್ನು ಹುಡುಕಿ ಖಾಲಿ ಜಾಗಗಳಲ್ಲಿ ಬರೆಯಿರಿ.

—	45		37			54		60	
		58	12	36	44		71		18
ಉತ್ತರ	21	8		47		33	14	45	9

* **75** ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಕೆಲವು ಆನೆಗಳು ಕಾಡಿನ ಮೂಲಕ ನಡೆದುಕೊಂಡು ಹೋಗುತ್ತಿದ್ದವು. ಒಂದು ಆನೆ ಮುಂದೆ ಮತ್ತು ಎರಡು ಆನೆಗಳು ಹಿಂದೆ ಇದ್ದವು. ಎರಡು ಆನೆಗಳು ಮುಂದೆ ಮತ್ತು ಒಂದು ಆನೆ ಹಿಂದೆ ಇದ್ದವು. ಒಂದು ಆನೆ ಎರಡು ಆನೆಗಳ ನಡುವೆ ನಡೆಯುತ್ತಿತ್ತು. ಮೂರು ಆನೆಗಳು ಒಂದರ ನಂತರ ಒಂದರಂತೆ ಸಾಲಿನಲ್ಲಿ ನಡೆಯುತ್ತಿದ್ದವು. ಕಾಡಿನ ಮೂಲಕ ಒಟ್ಟು ಎಷ್ಟು ಆನೆಗಳು ನಡೆಯುತ್ತಿದ್ದವು?


☐



76 ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

3 ಸೇಬಿನ ಮರಗಳಿಂದ 30 ಸೇಬುಗಳು ಕೆಳಗೆ ಬಿದ್ದವು. ಒಂದು ಮರದಿಂದ 18 ಸೇಬುಗಳು, ಎರಡನೇ ಮರದಿಂದ 3 ಸೇಬುಗಳು ಬಿದ್ದವು. ಹಾಗಾದರೆ ಮೂರನೇ ಮರದಿಂದ ಎಷ್ಟು ಸೇಬುಗಳು ಬಿದ್ದವು?

77 ವೃತ್ತಗಳಲ್ಲಿ ಕಾಣೆಯಾದ ಸಂಖ್ಯೆಗಳನ್ನು ಬರೆಯಿರಿ.



***78** ಒಂದೇ ಅಳತೆಯ 5 ಸಣ್ಣ ಕೋಲುಗಳನ್ನು ಬಳಸಿ 3 ಚತುರ್ಭುಜಗಳನ್ನು ಮಾಡಿ. ಈ ಆಕೃತಿಗಳ ಚಿತ್ರ ಬಿಡಿಸಿ.

79 ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಒಂದು ಪಂಜರದಲ್ಲಿ 7 ಗಿಳಿಗಳು ಮತ್ತು ಎರಡನೇ ಪಂಜರದಲ್ಲಿ ಹೆಚ್ಚಾಗಿ 3 ಗಿಳಿಗಳು ಇದ್ದವು. ಮೂರನೇ ಪಂಜರದಲ್ಲಿ ಎರಡನೇಯುದಕ್ಕಿಂತ 4 ಗಿಳಿಗಳು ಹೆಚ್ಚು ಇದ್ದವು. ಎರಡನೇ ಮತ್ತು ಮೂರನೇ ಪಂಜರಗಳಲ್ಲಿ ಎಷ್ಟು ಗಿಳಿಗಳು ಇದ್ದವು?



80 ಪ್ರತಿಯೊಂದು ಉಕ್ತಿಯನ್ನು ಅದರ ಸರಿ ಉತ್ತರದೊಂದಿಗೆ ಜೋಡಿಸಿ.

18 + 7   52 − 7   70   100 − 30

25   50 − 25   45   35 + 35   14

28 + 17   8 + 6   52 − 38

***81** ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

ಒಬ್ಬ ಸಹೋದರ ಒಮ್ಮೆ ತನ್ನ ಸಹೋದರಿಗೆ, "ನಾನು ನಿನಗಿಂತ 3 ವರ್ಷ ದೊಡ್ಡವನು. 2 ವರ್ಷಗಳಲ್ಲಿ ನಾನು ನಿನಗಿಂತ ಎಷ್ಟು ವರ್ಷ ದೊಡ್ಡವನಾಗುತ್ತೇನೆ?" ಎಂದು ಹೇಳಿದನು.

ಮೊತ್ತ ಕಂಡುಹಿಡಿದು ಉತ್ತರವನ್ನು ಬರೆಯಿರಿ.

82 ಒಂದು ತರಗತಿ ಕೋಣೆಯಲ್ಲಿ 17 ಮೇಜುಗಳಿದ್ದವು. ಮೊದಲು 3 ಮೇಜುಗಳನ್ನು ತೆಗೆದುಕೊಂಡು ಹೋಗಲಾಯಿತು; ನಂತರ, ಇನ್ನೂ 5 ಮೇಜುಗಳನ್ನು ತೆಗೆದುಕೊಂಡು ಹೋಗಲಾಯಿತು. ತರಗತಿ ಕೋಣೆಯಲ್ಲಿ ಈಗ ಎಷ್ಟು ಮೇಜುಗಳು ಉಳಿದಿವೆ? ☐

83 ಸಮನಾದ ಉತ್ತರವನ್ನು ಹೊಂದಿರುವ ಉಕ್ತಿಗಳನ್ನು ಜೋಡಿಸಿ.

75 + 16 = ☐	60 − 9 = ☐
48 − 9 = ☐	24 + 15 = ☐
97 − 44 = ☐	38 + 53 = ☐
63 − 12 = ☐	22 + 31 = ☐



***84** ಒಬ್ಬ ಹುಡುಗಿಯ ಬಳಿ ಎರಡು ಡಬ್ಬಿಗಳಿವೆ. ಒಂದು ಡಬ್ಬಿಯಲ್ಲಿ 5 ಲೀಟರ್ ನೀರು ಮತ್ತು ಇನ್ನೊಂದು ಡಬ್ಬಿಯಲ್ಲಿ 3 ಲೀಟರ್ ನೀರು ಹಿಡಿಸುತ್ತದೆ. (ಬಕೆಟ್ ನಲ್ಲಿ 12 ಲೀಟರ್ ನೀರು ಹಿಡಿಸುತ್ತದೆ.) ಈ ಎರಡು ಡಬ್ಬಿಗಳನ್ನು ಬಳಸಿ ನೀವು ನಿಖರವಾಗಿ 7 ಲೀಟರ್ ನೀರನ್ನು ಬಕೆಟ್‌ಗೆ ಹೇಗೆ ಸುರಿಯಬಹುದು?



ಒಂದು ದಾಳದಾಟ

"ಕಾಡಿನ ಮೂಲಕ ಶಾಲೆಗೆ ಹೋಗುವ ದಾರಿಯಲ್ಲಿ"


ಎರಡು ಕೋತಿಗಳನ್ನು ಕಾಡಿನ ಮೂಲಕ ಶಾಲೆಗೆ ತಲುಪಿಸಬೇಕು. ನೀವು ಅವುಗಳನ್ನು ಅಲ್ಲಿಗೆ ಕರೆದೊಯ್ಯಬೇಕು. ಇದನ್ನು ಮಾಡಲು, ನೀವು ಮೊದಲು ಪುಟ 45 ರಲ್ಲಿರುವ ಅನುಬಂಧದಿಂದ ದಾಳಗಳನ್ನು ಕತ್ತರಿಸಿ ಅಂಟಿಸಬೇಕು. ನಂತರ ಕೌಂಟರ್‌ಗಳನ್ನು ಕತ್ತರಿಸಿ ತೆಗೆಯಬೇಕು. ನಿಮ್ಮಲ್ಲಿ ಒಬ್ಬರು ಚಿಕ್ಕ ಕೋತಿಯನ್ನು ಶಾಲೆಗೆ ಕರೆದೊಯ್ಯುತ್ತಾರೆ, ಮತ್ತು ಇನ್ನೊಬ್ಬರು ದೊಡ್ಡ ಕೋತಿಯನ್ನು ಕರೆದೊಯ್ಯುತ್ತಾರೆ.

ದಾಳಗಳನ್ನು ಒಂದೊಂದಾಗಿ ಎಸೆಯಿರಿ ಮತ್ತು ದಾಳದ ಮೇಲ್ಭಾಗದಲ್ಲಿ ತೋರಿಸುವ ಚುಕ್ಕೆಗಳ ಸಂಖ್ಯೆಗೆ ಅನುಗುಣವಾದ ವೃತ್ತಗಳ ಸಂಖ್ಯೆಗೆ ನಿಮ್ಮ ಕೌಂಟರ್ ಅನ್ನು ಸರಿಸಿ.

ನೀವು ಕಂದು ಬಣ್ಣದ ವೃತ್ತವನ್ನು ತಲುಪಿದರೆ, ನಿಮ್ಮ ಕೌಂಟರ್ ಅನ್ನು ಬಾಣದ ದಿಕ್ಕಿನಲ್ಲಿ ಮೇಲಕ್ಕೆಸರಿಸಿ.

ನೀವು ಕಪ್ಪು ವೃತ್ತವನ್ನು ತಲುಪಿದರೆ, ನಿಮ್ಮ ಕೌಂಟರ್ ಅನ್ನು ಬಾಣದ ದಿಕ್ಕಿನಲ್ಲಿ ಕೆಳಕ್ಕೆ ಸರಿಸಿ.

ಕಂದು ಬಣ್ಣದ ಉಂಗುರವಿರುವ ವೃತ್ತವನ್ನು ತಲುಪಿದರೆ, ನೀವು ಹಿಂದಿದ್ದ ವೃತ್ತಕ್ಕೆ ಹಿಂದಿರುಗಿರಿ. ಮೊದಲು ಕೋತಿಯನ್ನು ಶಾಲೆಗೆ ಕರೆದೊಯ್ಯುವವನು ಈ ಆಟದ ವಿಜೇತ.


1
2
3
4
5
6
7
8
9
10
11
12
13
14
15
16
17
18
19
20
21
22
23
24
25
26
27
28
29
30
31
32
33
34
35
36
37
38
39
40
41
42
43

11. ಮೋಜಿಗಾಗಿ ಎಣಿಕೆ



ಈ ಆಟವನ್ನು ಇಬ್ಬರು ಆಡಬೇಕು ಮತ್ತು ಅದನ್ನು ಸರಿಯಾಗಿ ಆಡಲಾಗುತ್ತಿದೆಯೆ ಎಂದು ಖಚಿತಪಡಿಸಿಕೊಳ್ಳಲು ಒಬ್ಬ ರೆಫರಿಯನ್ನು ನೇಮಿಸಬೇಕು.

ಕೋಷ್ಟಕಗಳು 1-a ಮತ್ತು 1-b ಗಳು 1 ರಿಂದ 30 ರವರೆಗಿನ ಅಂಕಿಗಳನ್ನು ಹೊಂದಿವೆ. ಕೋಷ್ಟಕಗಳು 2-a ಮತ್ತು 2-b ಗಳು 1 ರಿಂದ 42 ರವರೆಗಿನ ಅಂಕಿಗಳನ್ನು ಹೊಂದಿವೆ. ಪ್ರತಿಯೊಂದು ಕೋಷ್ಟಕದ ಸೆಟ್ ಒಂದೇ ರೀತಿಯ ಅಂಕಿಗಳನ್ನು ಹೊಂದಿದೆ ಆದರೆ ಅವುಗಳಲ್ಲಿ ಸಂಖ್ಯೆಗಳನ್ನು ವಿಭಿನ್ನವಾಗಿ ಜೋಡಿಸಲಾಗಿದೆ.

ಒಬ್ಬ ಆಟಗಾರ ಕೋಷ್ಟಕ 1-ಎ ತೆಗೆದುಕೊಳ್ಳುತ್ತಾನೆ ಮತ್ತು ಇನ್ನೊಬ್ಬ ಆಟಗಾರ ಕೋಷ್ಟಕ 1-ಬಿ ತೆಗೆದುಕೊಳ್ಳುತ್ತಾನೆ. ನಂತರ ರೆಫರಿಯ ಮಾತಿನ ಮೇರೆಗೆ ಪ್ರತಿಯೊಬ್ಬ ಆಟಗಾರನು ತನ್ನ ಕೋಷ್ಟಕದಲ್ಲಿರುವ ಎಲ್ಲಾ ಅಂಕಿಗಳನ್ನು ಒಂದರ ನಂತರ ಒಂದರಂತೆ ಸರಿಯಾದ ಕ್ರಮದಲ್ಲಿ ಹೆಸರಿಸಲು ಪ್ರಾರಂಭಿಸುತ್ತಾನೆ (1 ರಿಂದ ಪ್ರಾರಂಭಿಸಿ). ಕೋಷ್ಟಕವನ್ನು ಮೊದಲು ಮುಗಿಸಿದ ಆಟಗಾರ ವಿಜೇತ. ನಂತರ ಕೋಷ್ಟಕ 2 ಅನ್ನು ಬಳಸಲಾಗುತ್ತದೆ.

25	16	21	3	6	8
23	12	4	15	7	17
28	19	30	29	20	18
27	14	10	24	1	22
9	11	5	2	26	13

ಕೋಷ್ಟಕ a

17	8	24	6	29	18
23	5	13	19	3	27
20	7	4	21	16	11
25	15	1	10	14	22
9	2	26	12	28	30

ಕೋಷ್ಟಕ b

40	7	12	31	29	3
38	26	5	17	30	18
22	37	8	15	24	11
2	13	27	35	25	42
33	23	16	6	14	32
41	9	28	10	36	1
4	19	34	21	39	20

ಕೋಷ್ಟಕ 2a





5	27	32	12	26	1
41	9	20	28	10	36
11	25	16	13	37	3
24	15	6	17	30	23
38	22	2	8	7	40
4	19	35	29	34	21
33	14	18	39	42	31

ಕೋಷ್ಟಕ 2b


III. ಸಣ್ಣ ಕಡ್ಡಿಗಳನ್ನು ಹೊಂದಿಸುವ ಆಟಗಳು



ಈ ಆಟಗಳಿಗೆ ನಿಮಗೆ ಒಂದೇ ಅಳತೆಯ ಉದ್ದದ 30 ಸಣ್ಣ ಕಡ್ಡಿಗಳು ಬೇಕಾಗುತ್ತವೆ. ಹಲವಾರು ಜನರು ಆಡಬಹುದು. ಕೆಲಸವನ್ನು ಮೊದಲು ಪೂರ್ಣಗೊಳಿಸಿದವನು ವಿಜಯಿಯಾಗುತ್ತಾನೆ. ಅಥವಾ ಅದನ್ನು ಪೂರ್ಣಗೊಳಿಸಲು ಒಂದಕ್ಕಿಂತ ಹೆಚ್ಚು ಮಾರ್ಗಗಳನ್ನು ಕಂಡುಕೊಳ್ಳುವವನು (ಸಾಧ್ಯವಾದರೆ)ಸಹ ವಿಜೇತನೆ.


ಆಟದ ನಂತರ ಆಟಗಾರರು 43-44 ಪುಟಗಳಲ್ಲಿ ಉತ್ತರಗಳನ್ನು ನೋಡಿ ತಮ್ಮ ಉತ್ತರಗಳನ್ನು ಪರಿಶೀಲಿಸಿಕೊಳ್ಳುತ್ತಾರೆ.

1) ಈ ಚಿತ್ರದಲ್ಲಿ ತೋರಿಸಿರುವಂತೆ ಕಡ್ಡಿಗಳನ್ನು ಜೋಡಿಸಿ:




ಈಗ ಎರಡು ಕಡ್ಡಿಗಳನ್ನು ತೆಗೆಯಿರಿ, ಇದರಿಂದ ಒಂದೇ ಅಳತೆಯ ನಾಲ್ಕು ಚೌಕಗಳು ಉಳಿಯುತ್ತವೆ. ಅದನ್ನು ವಿಭಿನ್ನ ರೀತಿಯಲ್ಲಿ ಮಾಡಿ.

2) ಈ ಚಿತ್ರದಲ್ಲಿ ತೋರಿಸಿರುವಂತೆ ಕಡ್ಡಿಗಳನ್ನು ಜೋಡಿಸಿ:



ಈಗ ಎರಡು ಕಡ್ಡಿಗಳ ಸ್ಥಾನವನ್ನು ಬದಲಾಯಿಸಿ ಇದರಿಂದ ಒಂದೇ ಅಳತೆಯ ಐದು ಚೌಕಗಳು ಕಾಣಿಸಿಕೊಳ್ಳುತ್ತವೆ. ಅದನ್ನು ವಿಭಿನ್ನ ರೀತಿಯಲ್ಲಿ ಮಾಡಿ.

3) ಈ ಚಿತ್ರದಲ್ಲಿ ತೋರಿಸಿರುವಂತೆ ಕಡ್ಡಿಗಳನ್ನು ಜೋಡಿಸಿ:



ಈಗ ಒಂದೇ ಅಳತೆಯ ಮೂರು ಚೌಕಗಳು ಉಳಿಯುವಂತೆ ಒಂದು ಕಡ್ಡಿಗಳನ್ನು ತೆಗೆದುಹಾಕಿ.

4) ಈ ಚಿತ್ರದಲ್ಲಿ ತೋರಿಸಿರುವಂತೆ ಕಡ್ಡಿಗಳನ್ನು ಜೋಡಿಸಿ:



ಈಗ ಎರಡು ಕಡ್ಡಿಗಳನ ಸ್ಥಾನವನ್ನು ಬದಲಾಯಿಸಿ ಇದರಿಂದ ಮೂರು ತ್ರಿಕೋನಗಳ ಬದಲು ಎರಡು ತ್ರಿಕೋನಗಳು ಕಾಣಿಸಿಕೊಳ್ಳುತ್ತವೆ.

IV. ಮ್ಯಾಜಿಕ್ ಚೌಕಗಳು



ಮಾಯಾ ಚೌಕ ಎಂದರೆ ಒಂದು ಚೌಕ, ಇದರಲ್ಲಿ ಪ್ರತಿ ಅಡ್ಡಸಾಲಿನಲ್ಲಿ, ಪ್ರತಿ ಕಂಬಸಾಲಿನಲ್ಲಿ ಮತ್ತು ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಕರ್ಣೀಯವಾಗಿ ಸಂಖ್ಯೆಗಳ ಮೊತ್ತ ಸಮವಾಗಿರುತ್ತದೆ.

ಉದಾಹರಣೆಗೆ.

2	9	4
7	5	3
6	1	8

ಈ ಚೌಕದ ಪ್ರತಿಯೊಂದು ಸಾಲಿನಲ್ಲಿರುವ ಸಂಖ್ಯೆಗಳನ್ನು ಕೂಡಿದಾಗ, ಪ್ರತಿಯೊಂದು ಸಂದರ್ಭದಲ್ಲೂ ಮೊತ್ತ 15 ಎಂದು ನೀವು ಕಂಡುಕೊಳ್ಳುತ್ತೀರಿ. ಆಟಕ್ಕೆ ತಲಾ ಎರಡು ರೂಪಾಂತರಗಳನ್ನು ಹೊಂದಿರುವ ಐದು ಚೌಕಗಳನ್ನು ನೀಡಲಾಗುತ್ತದೆ, ಇದು ಇಬ್ಬರು ಆಟಗಾರರಿಗೆ. ಪ್ರತಿಯೊಬ್ಬ ಆಟಗಾರನು 1-A ಅಥವಾ 1-B ಎಂದು ಹೇಳಿ ಒಂದು ಚೌಕವನ್ನು ಆರಿಸಿಕೊಳ್ಳುತ್ತಾನೆ ಮತ್ತು ಖಾಲಿಯಿರುವ ಚೌಕಗಳಲ್ಲಿ ಸಂಖ್ಯೆಗಳನ್ನು ತುಂಬುತ್ತಾನೆ. ತನ್ನ ಚೌಕವನ್ನು ಮೊದಲು ಪೂರ್ಣಗೊಳಿಸುವವರು ವಿಜೇತರು.

5		
	6	
9		

ಚೌಕ 1-A
(ಮೊತ್ತ,18)



		3
	6	
		7

ಚೌಕ1-B
(ಮೊತ್ತ,18)

ಚೌಕ 2-A

	12	
	8	
	4	11

ಚೌಕ 2-B

5	12	
	8	
	4	

ಚೌಕ 3-A

		3
5	9	
15		

ಚೌಕ 3-B

7		
	9	13
		11

ಚೌಕ 4-A

17	21	25
27		

ಚೌಕ 4-B

17	21	25
		23

ಚೌಕ 5-A (ಮೊತ್ತ, 51)

		14
	13	18

ಚೌಕ 5-B (ಮೊತ್ತ, 51)

16	21	
		18

ವಿ. ಬುಗುರಿಗಲಳೊಂದಿಗೆ ಆಟಗಳು



ಈ ಆಟಗಳಲ್ಲಿ ಹಲವಾರು ಆಟಗಾರರು ಭಾಗವಹಿಸಬಹುದು. ಅನುಬಂಧದಿಂದ (ಪುಟ 47) ಬುಗುರಿಗಳನ್ನು ಕತ್ತರಿಸಿ ಕಾರ್ಡ್ ಬೋರ್ಡ್ ಅಥವಾ ಗಟ್ಟಿಯಾದ ಕಾಗದದ ಮೇಲೆ ಅಂಟಿಸಿ. ಬುಗುರಿಯನ್ನು ತಿರುಗಿಸಲು, ಅದರ ಕೇಂದ್ರದ ಮೂಲಕ ಹರಿತವಾದ ತುದಿಯನ್ನು ಹೊಂದಿರುವ ತೆಳುವಾದ ಕಡ್ಡಿಯನ್ನು ಹಾಕಿ.

1) ಸಂಖ್ಯೆಯನ್ನು ಕೂಡುವ ಆಟ.

ಈ ಆಟದಲ್ಲಿ ಬುಗುರಿ 1 ಅನ್ನು ಬಳಸಲಾಗುತ್ತದೆ.

ಆಟಗಾರರು ತಾವು ಕೂಡಲು ಬಯಸುವ ಸಂಖ್ಯೆಯನ್ನು (ಉದಾಹರಣೆ 7) ಮೊದಲೇ ನಿರ್ಧರಿಸುತ್ತಾರೆ. ನಂತರ ನಾಯಕನು ಬುಗುರಿಯನ್ನು ತಿರುಗಿಸುತ್ತಾನೆ. ಅದು ನಿಂತಾಗ, ಬುಗುರಿಯು ಒಂದು ಬದಿಯಲ್ಲಿ ಬೀಳುತ್ತದೆ. ನಾಯಕನು ಅದನ್ನು ಎತ್ತಿಕೊಂಡು ಆ ಬದಿಯಲ್ಲಿ ಗುರುತಿಸಲಾದ ಸಂಖ್ಯೆಯನ್ನು ತೋರಿಸುತ್ತಾನೆ (ಅಥವಾ ಹೇಳುತ್ತಾನೆ). ನಂತರ ಕೂಡುವ ಸಂಖ್ಯೆಯನ್ನು (ಮೇಲೆ ತಿಳಿಸಿದಂತೆ 7) ತೋರಿಸಿರುವ ಸಂಖ್ಯೆಗೆ ಕೂಡಬೇಕಾಗುತ್ತದೆ. ಪ್ರತಿಯೊಬ್ಬ ಆಟಗಾರನು ತನ್ನ ಫಲಿತಾಂಶವನ್ನು ಬರೆಯುತ್ತಾನೆ. ನಂತರ ಬುಗುರಿಯನ್ನು ಪುನಃ ತಿರುಗಿಸಲಾಗುತ್ತದೆ ಮತ್ತು ಕಾರ್ಯವಿಧಾನವನ್ನು ಪುನರಾವರ್ತಿಸಲಾಗುತ್ತದೆ.

ಆಟದ ಕೊನೆಯಲ್ಲಿ ಎಲ್ಲಾ ಫಲಿತಾಂಶಗಳನ್ನು ಪರಿಶೀಲಿಸಲಾಗುತ್ತದೆ. ಎಲ್ಲಾ ಲೆಕ್ಕಾಚಾರಗಳು ಸರಿಯಾಗಿ ಮಾಡಿರುವವರೇ ವಿಜೇತರು. **ಗಮನಿಸಿ:** ಕೂಡಲಾಗುವ ಸಂಖ್ಯೆಯ ಮತ್ತು ಬುಗುರಿಯ ಮೇಲೆ ಬರೆದಿರುವ ಯಾವುದೇ ಸಂಖ್ಯೆಯ ಮೊತ್ತ100 ಕ್ಕಿಂತ ಹೆಚ್ಚಿರಬಾರದು.

2) ಸಂಖ್ಯೆಯನ್ನು ಕಳೆಯುವ ಆಟ

ಈ ಆಟದಲ್ಲಿ ಬುಗುರಿ 2 ಅನ್ನು ಬಳಸಲಾಗುತ್ತದೆ.

ಈ ಆಟವನ್ನು ಮೊದಲನೆಯ ಆಟದಂತೆಯೇ ಆಡಲಾಗುತ್ತದೆ. ಒಂದೇ ವ್ಯತ್ಯಾಸವೆಂದರೆ ಕಳೆಯುವ ಸಂಖ್ಯೆಯನ್ನು ಮೊದಲೇ ನಿರ್ಧರಿಸಿ ಬುಗುರಿಯ ಮೇಲ್ಭಾಗದ ಮೇಲೆ ಬರುವ ಸಂಖ್ಯೆಗಳಿಂದ ಕಳೆಯಲಾಗುತ್ತದೆ.

ಗಮನಿಸಿ: ಕಳೆಯಲು ಬಯಸುವ ಸಂಖ್ಯೆಯು ಬುಗುರಿಯ ಮೇಲ್ಭಾಗದಲ್ಲಿರುವ ಯಾವುದೇ ಸಂಖ್ಯೆಗಿಂತ ಹೆಚ್ಚಿರಬಾರದು.

3) ಒಂದು ಬುಗುರಿ ಮತ್ತು ಒಂದು ದಾಳ

ಬುಗುರಿ 1 ಅಥವಾ ಬುಗುರಿ 2 ಮತ್ತು ಚುಕ್ಕೆಗಳಿರುವ ದಾಳ (ಪುಟ 45) ಗಳನ್ನು ಬಳಸಲಾಗುತ್ತದೆ.

ಒಬ್ಬ ಆಟಗಾರನು ಬುಗುರಿಯನ್ನು ತಿರುಗಿಸುತ್ತಾನೆ, ಮತ್ತು ಇನ್ನೊಬ್ಬನು ದಾಳವನ್ನು ಎಸೆಯುತ್ತಾನೆ. ಬುಗುರಿ ಮತ್ತು ದಾಳಗಳು ತಲಾ ಒಂದೊಂದು ಸಂಖ್ಯೆಯನ್ನು ತೋರಿಸುತ್ತವೆ. ಮೊದಲು, ಈ ಸಂಖ್ಯೆಗಳನ್ನು ಒಟ್ಟಿಗೆ ಕೂಡಬೇಕಾಗುತ್ತದೆ. ನಂತರ ಚಿಕ್ಕ ಸಂಖ್ಯೆಯನ್ನು ದೊಡ್ಡದರಿಂದ ಕಳೆಯಲಾಗುತ್ತದೆ. ಮೊದಲು ಸರಿಯಾದ ಉತ್ತರವನ್ನು ನೀಡುವ ಆಟಗಾರನು ಒಂದು ಅಂಕವನ್ನು ಗಳಿಸುತ್ತಾನೆ.

4) 100 ಕ್ಕೆ ಸೇರಿಸಿ

ಈ ಆಟದಲ್ಲಿ ಬುಗುರಿ 3 ಅನ್ನು ಬಳಸಲಾಗುತ್ತದೆ.

ಪ್ರತಿಯೊಬ್ಬ ಆಟಗಾರನು ಬುಗುರಿಯನ್ನು ಒಂದೊಂದಾಗಿ ತಿರುಗಿಸಿ ಮೇಲ್ಭಾಗದ ಬದಿಯಲ್ಲಿ ತೋರಿಸುವ ಸಂಖ್ಯೆಯನ್ನು ಬರೆಯುತ್ತಾನೆ. ಪ್ರತಿ ತಿರುವಿನ ನಂತರ ಅವನು ತನ್ನ ಹೊಸ ಸಂಖ್ಯೆಯನ್ನು ತನ್ನ ಹಿಂದಿನ ಮೊತ್ತಕ್ಕೆ ಸೇರಿಸುತ್ತಾನೆ.

ಮೊದಲು 100 ಅಂಕಗಳನ್ನು ತಲುಪಿದವರು ವಿಜೇತರು.

5) ಎರಡು ಬುಗುರಿಗಳು


ಈ ಆಟದಲ್ಲಿ ಬುಗುರಿ ಸಂಖ್ಯೆ 3 ಮತ್ತು ಬುಗುರಿ ಸಂಖ್ಯೆ 4 ನ್ನು ಬಳಸಲಾಗುತ್ತದೆ. ಆಟಗಾರರು ಮುಂಚಿತವಾಗಿ ಯಾವುದೇ ಎರಡು-ಅಂಕಿಯ ಸಂಖ್ಯೆಯನ್ನು ಆಯ್ಕೆ ಮಾಡುತ್ತಾರೆ (ಉದಾ. 25). ಬುಗುರಿ 4 (+ ಮತ್ತು – ಚಿಹ್ನೆಗಳೊಂದಿಗೆ) ತಿರುಗಿಸಲಾಗುತ್ತದೆ, ಮತ್ತು ನಂತರ ಬುಗುರಿ 3 (ಸಂಖ್ಯೆಗಳೊಂದಿಗೆ) ಅನ್ನು ತಿರುಗಿಸಲಾಗುತ್ತದೆ.

ಬುಗುರಿ 4 + ಚಿಹ್ನೆಯನ್ನು ತೋರಿಸಿದರೆ, ಬುಗುರಿ 3 ತೋರಿಸಿದ ಸಂಖ್ಯೆಯನ್ನು ಆಯ್ಕೆ ಮಾಡಿದ ಸಂಖ್ಯೆಗೆ ಸೇರಿಸಲಾಗುತ್ತದೆ. ಅದು (-) ಚಿಹ್ನೆಯನ್ನು ತೋರಿಸಿದರೆ, ಬುಗುರಿ 3 ತೋರಿಸಿದ ಸಂಖ್ಯೆಯನ್ನು ಆಯ್ಕೆ ಮಾಡಿದ ಸಂಖ್ಯೆಯಿಂದ ಕಳೆಯಲಾಗುತ್ತದೆ. ಎಲ್ಲಾ ಉತ್ತರಗಳು ಸರಿಯಾಗಿರುವ ಆಟಗಾರರು ವಿಜೇತನಾಗುತ್ತಾನೆ.

ಸಮಸ್ಯೆಗಳಿಗೆ ಉತ್ತರಗಳು

39. ಒಂದು ಕಿಲೋಗ್ರಾಂ ಹತ್ತಿ ಉಣ್ಣೆ ಮತ್ತು ಒಂದು ಕಿಲೋಗ್ರಾಂ ಕಬ್ಬಿಣವು ಸಮವಾಗಿ ತೂಗುತ್ತದೆ.
42. ಕುಟುಂಬದಲ್ಲಿ 6 ಮಕ್ಕಳಿದ್ದಾರೆ.
45. ಎಲ್ಲಾ 7 ಮೇಣದಬತ್ತಿಗಳು ಮೇಜಿನ ಮೇಲೆ ಉಳಿದಿವೆ.
48. 3 ನಿಮಿಷಗಳು.
51. ಯಾವುದೂ ಇಲ್ಲ. ಉಳಿದ ಎಲ್ಲಾ ಗುಬ್ಬಚ್ಚಿಗಳು ಹಾರಿಹೋದವು - ಅವು ಬೆಕ್ಕಿನಿಂದ ಭಯಗೊಂಡಿದ್ದವು.

53



57. 5 ಲೀಟರ್ ಕ್ಯಾನ್‌ಗೆ 2 ಲೀಟರ್ ನೀರನ್ನು ಎರಡು ಬಾರಿ ಸುರಿಯಿರಿ, ನಂತರ 2 ಲೀಟರ್ ನೀರನ್ನು 2 ಲೀಟರ್ ಕ್ಯಾನ್‌ಗೆ ಸುರಿಯಿರಿ, ಆಗ ನಿಮಗೆ ಒಟ್ಟು 6 ಲೀಟರ್ ನೀರು ಸಿಗುತ್ತದೆ.

60. ತ್ರಿಕೋನ, ಏಕೆಂದರೆ ಇತರ ಆಕೃತಿಗಳು ಪ್ರತಿಯೊಂದೂ 4 ಕೋನಗಳನ್ನು ಹೊಂದಿವೆ.

63. ಹುಡುಗ 40 ಮೆಟ್ಟಿಲುಗಳನ್ನು ಹತ್ತಬೇಕು (ನೆಲ ಮಹಡಿಯಿಂದ ಮೊದಲ ಮಹಡಿಗೆ 20 ಹೆಜ್ಜೆಗಳು ಮತ್ತು ಮೊದಲ ಮಹಡಿಯಿಂದ ಎರಡನೇ ಮಹಡಿಗೆ 20 ಮೆಟ್ಟಿಲುಗಳು).

66. ಹುಡುಗ 6 ಬಾರಿ ಕತ್ತರಿಸುತ್ತಾನೆ.

69



72. 6 ಮಕ್ಕಳು.
75. 3 ಆನೆಗಳು ಒಂದರ ಹಿಂದೆ ಒಂದರಂತೆ ಸಾಲಾಗಿ ನಡೆಯುತ್ತಿದ್ದವು.


78




81. ಸಹೋದರ ಯಾವಾಗಲೂ ತನ್ನ ಸಹೋದರಿಗಿಂತ 3 ವರ್ಷ ದೊಡ್ಡವನಾಗಿರುತ್ತಾನೆ.
84. ಹುಡುಗಿ ಬಕೆಟ್‌ಗೆ 3 ಲೀಟರ್ ನೀರನ್ನು ನಾಲ್ಕು ಬಾರಿ ಸುರಿಯಬೇಕು ಮತ್ತು ನಂತರ 5 ಲೀಟರ್ ನೀರನ್ನು ಸುರಿಯಬೇಕು.

ಕಡ್ಡಿಗಳೊಂದಿಗಿನ ಆಟಗಳಿಗೆ ಉತ್ತರಗಳು

ಕಾರ್ಯ 1-4 ರ ಉತ್ತರಗಳಲ್ಲಿ ತೆಗೆದುಹಾಕಬೇಕಾದ ಕೋಲುಗಳನ್ನು ದಾಟಿಸಲಾಗುತ್ತದೆ. ಚುಕ್ಕೆಗಳಿರುವ ಗೆರೆಗಳು ಕೆಲವು ಕೋಲುಗಳ ಅಗತ್ಯವಿರುವ ಹೊಸ ಸ್ಥಾನಗಳನ್ನು ತೋರಿಸುತ್ತವೆ.







ಅನುಬಂಧ

ಒಂದು ದಾಳ (ಆಟ "ಕಾಡಿನ ಶಾಲೆಗೆ ಹೋಗುವ ದಾರಿಯಲ್ಲಿ ")


ಒಂದು ದಾಳ (ಆಟ 3 “ಒಂದು ಬುಗುರಿ ಮತ್ತು ಒಂದು ದಾಳ”)




ಕೌಂಟರ್‌ಗಳು (ಆಟ “**ಕಾಡಿನ ಮೂಲಕ ಶಾಲೆಗೆ ಹೋಗುವ ದಾರಿಯಲ್ಲಿ**”)



ಬುಗುರಿ ಸಂ. 1
(ಪಂದ್ಯ 1 ಮತ್ತು 3)



ಬುಗುರಿ ಸಂ. 2
(ಪಂದ್ಯ 2 ಮತ್ತು 3)





ಬುಗುರಿ ಸಂ. 3
(ಪಂದ್ಯ 4 ಮತ್ತು 5)



ಬುಗುರಿ ಸಂ. 4
(ಆಟ 5)





Н. Ф. Ваннар

ЗАБАВНАЯ МАТЕМАТИКА

Редактор *Н. И. Максименко*
Художник *Б. Л. Рытман*
Художественный редактор *Л. Ф. Малышева*
Технический редактор *Г. Е. Петровская*

Сдано в набор 11.01.84. Подписано к печати 17.05.84. Формат $70 \times 90^1/_{16}$. Бум. кн.-журн. Печать офсетная. Усл. печ. л. 3,51. Усл. кр.-отт. 7,61. Уч.-изд. л. 2,58. Тираж 25 000 экз. Заказ 748. Цена 15 коп.

Ордена Трудового Красного Знамени издательство «Просвещение» Государственного комитета РСФСР по делам издательств, полиграфии и книжной торговли. 129846, Москва, ГСП-110, 3-й проезд Марьиной рощи, 41.

Смоленский полиграфкомбинат Росглавполиграфпрома Государственного комитета РСФСР по делам издательств, полиграфии и книжной торговли. Смоленск-20, ул. Смольянинова, 1.

15 к.

